# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಗುಣಮಟ್ಟದ ಆಧಾರದಲ್ಲಿ ಉತ್ಪಾದನಾ ವೆಚ್ಚವನ್ನು ಭರಿಸಲು ರೇಷ್ಮೆ ಗೂಡು ಉತ್ಪಾದನಾ ಮತ್ತು ಉತ್ಪಾದಕತೆಯ ಪ್ರೋತ್ಸಾಹಧನ ಯೋಜನೆಯ ಮಾರ್ಪಾಡು ಕುರಿತು.

**ಓದಲಾಗಿದೆ:**

1) ಸರ್ಕಾರದ ಆದೇಶ ಸಂಖ್ಯೆ: ತೋಇ 101 ರೇಕೃವಿ 2012, ದಿನಾಂಕ 17-07-2012
2) ಸರ್ಕಾರದ ಆದೇಶ ಸಂಖ್ಯೆ: ತೋಇ 107 ರೇಕೃವಿ 2014, ದಿನಾಂಕ 30-06-2014
3) ಸರ್ಕಾರದ ಆದೇಶ ಸಂಖ್ಯೆ: ತೋಇ 138 ರೇಕೃವಿ 2015, ದಿನಾಂಕ 25-06-2015
4) ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಪತ್ರ ಸಂಖ್ಯೆ: ಯೋಜನೆ/ಪಿಎಸ್1/ಹೊಕಾ-ದ.ರ/3/2016-17, ದಿನಾಂಕ 13/20-04-2016

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗು ರೇಷ್ಮೆ ನಿರ್ದೇಶಕರ ಆಪ್ತ ಶಾಖೆ
ದಿನಾಂಕ: 20/8/16
ಸಹಿ:

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ದಿನಾಂಕ 17-07-2012ರ ಆದೇಶದಲ್ಲಿ 2012-13ನೇ ಸಾಲಿನಲ್ಲಿ ರೇಷ್ಮೆ ಗೂಡಿನ ದರದಲ್ಲಿ ದಿಢೀರ್ ಕುಸಿತದಿಂದಾಗಿ ರೇಷ್ಮೆ ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದ ಹಿನ್ನಲೆಯಲ್ಲಿ ಸಂಕಷ್ಟ ಉಪಶಮನಕ್ಕಾಗಿ ಗುಣಮಟ್ಟದ ಆಧಾರದ ಮೇಲೆ ಪ್ರತಿ ಕೆ.ಜಿ. ಮಿಶ್ರತಳಿ ಗೂಡಿಗೆ ರೂ.10/- ಹಾಗೂ ದ್ವಿತಳಿ ಗೂಡಿಗೆ ರೂ.40/-ರಂತೆ ಪ್ರೋತ್ಸಾಹಧನವನ್ನು ಪಾವತಿಸಲು ಹಲವು ಕಾರ್ಯವಿಧಾನಗಳನ್ವಯ ಯೋಜನೆಯನ್ನು ಅನುಷ್ಠಾನಗೊಳಿಸಲು ಮಂಜೂರಾತಿ ನೀಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ದಿನಾಂಕ 30-06-2014ರ ಆದೇಶದಲ್ಲಿ ಉತ್ಪಾದಕತೆ ಮತ್ತು ಉತ್ಪಾದನೆ ಆಧಾರಿತ ಪ್ರೋತ್ಸಾಹಧನವನ್ನು ಸುಧಾರಿತ ಮಿಶ್ರ ತಳಿಗೆ ಕೆ.ಜಿ.ಗೆ 10 ರೂ.ಗಳಿಂದ 30 ರೂ.ಗಳಿಗೆ ಮತ್ತ ಬೈವೋಲ್ಟಿನ್ ತಳಿಗೆ 40 ರೂ.ಗಳಿಂದ 50 ರೂ.ಗಳಿಗೆ ಹೆಚ್ಚಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3)ರ ದಿನಾಂಕ 25-06-2015ರ ಆದೇಶದಲ್ಲಿ 2015-16ನೇ ಸಾಲಿನ ಪ್ರಾರಂಭದಿಂದ ರೇಷ್ಮೆ ಗೂಡಿನ ದರಗಳಲ್ಲಿ ಮತ್ತೆ ಕುಸಿತ ಉಂಟಾಗಿ ನವೆಂಬರ್ ಮಾಹೆಯವರೆಗೆ ಮುಂದುವರೆದು ರೇಷ್ಮೆ ಬೆಳೆಗಾರರು ಸಂಕಷ್ಟಕ್ಕೆ ಒಳಪಟ್ಟು ಪ್ರತಿಭಟನೆ ನಡೆಸಿದರು. ಇದರಿಂದ ರೇಷ್ಮೆ ಉದ್ದಿಮೆಯ ಅಭಿವೃದ್ಧಿಯಲ್ಲಿ ಹಿನ್ನಡೆ ಉಂಟಾಯಿತು. ಆದ್ದರಿಂದ ಭಾಗೀದಾರರನ್ನು ಸಂಕಷ್ಟದಿಂದ ಹೊರತರಲು ಪರಿಹಾರೋಪಾಯಗಳನ್ನು ಸೂಚಿಸಲು ಡಾ॥ ಬಸವರಾಜ ಹೆಚ್., ಕೃಷಿ ಅರ್ಥಶಾಸ್ತ್ರ ಪ್ರಾಧ್ಯಪಕರು ಇವರ ಅಧ್ಯಕ್ಷತೆಯಲ್ಲಿ ರೇಷ್ಮೆ ಗೂಡು, ಕಚ್ಚಾ ರೇಷ್ಮೆ ಉತ್ಪಾದನೆ, ಧಾರಣೆ ಹಾಗೂ ಮಾರಾಟ ವ್ಯವಸ್ಥೆಯ ಸಮಗ್ರ ಅಧ್ಯಯನ ಕೈಗೊಳ್ಳಲು ತಾಂತ್ರಿಕ ಸಮಿತಿಯನ್ನು ರಚಿಸಿ ಆದೇಶಿಸಲಾಗಿದೆ.

2016-17ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-53 ರಲ್ಲಿ ಈ ಕೆಳಕಂಡಂತೆ ಘೋಷಿಸಲಾಗಿದೆ:

> ಗುಣಮಟ್ಟದ ಆಧಾರದಲ್ಲಿ ಉತ್ಪಾದನಾ ವೆಚ್ಚವನ್ನು ಭರಿಸಲು ರೇಷ್ಮೆ ಗೂಡು ಉತ್ಪಾದನೆ ಮತ್ತು ಉತ್ಪಾದಕತೆಯ ಪ್ರೋತ್ಸಾಹಧನದ ಸೂಕ್ತ ರೀತಿಯ ಮಾರ್ಪಾಡು. ಆರಂಭದಲ್ಲಿ ಇದಕ್ಕೆ 20 ಕೋಟಿ ರೂ. ಅನುದಾನ.

ಮೇಲೆ ಓದಲಾದ ಕ್ರಮ ಸಂಖ್ಯೆ: (4)ರ ದಿನಾಂಕ 13/20-04-2016ರ ಪತ್ರದಲ್ಲಿ ರೇಷ್ಮೆ ಗೂಡು, ಕಚ್ಚಾ ರೇಷ್ಮೆ ಉತ್ಪಾದನೆ, ಧಾರಣೆ ಹಾಗೂ ಮಾರಾಟ ವ್ಯವಸ್ಥೆಯ ಸಮಗ್ರ ಅಧ್ಯಯನ

ಪು.ತಿ.ನೋ. . . .

ಕೈಗೊಂಡು ಸಮಿತಿಯು ದಿನಾಂಕ 20-10-2015 ರಂದು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತದೆ. ಸದರಿ ಸಮಿತಿ ವರದಿಯಲ್ಲಿನ ಒಂದು ಶಿಫಾರಸ್ಸು ಈ ಕೆಳಕಂಡಂತಿದೆ:

> ಬೆಲೆ ಸ್ಥಿರೀಕರಣಕ್ಕೆ ಪ್ರಸ್ತಾಪಿಸಿರುವ ಕನಿಷ್ಠ ಬೆಂಬಲ ಬೆಲೆಗಳ ಸಂಬಂಧಿತ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವವರೆಗೆ ಪ್ರಸ್ತುತ ನೀಡುತ್ತಿರುವ ಪ್ರತಿ ಕೆ.ಜಿ. ಮಿಶ್ರತಳಿ ಗೂಡಿಗೆ ರೂ. 30 ಹಾಗೂ ದ್ವಿತಳಿ ಸಂಕರಣಕ್ಕೆ ರೂ. 50 ರ ಉತ್ಪಾದಕತೆ ಮತ್ತು ಉತ್ಪಾದನಾ ಪ್ರೋತ್ಸಾಹಧನದ ಬದಲಿಗೆ ತಾತ್ಕಾಲಿಕ ಪರಿಹಾರವಾಗಿ ಪ್ರತಿ ಕೆ.ಜಿ. ಗೂಡಿಗೆ ರೂ 60 ರಂತೆ ರಕ್ಷಣಾತ್ಮಕ ದರವೆಂದು ನಿಗದಿಪಡಿಸಲು ಶಿಫಾರಸ್ಸು ಮಾಡಲಾಗಿದೆ.

ತಾಂತ್ರಿಕ ಸಮಿತಿಯ ವರದಿಯಲ್ಲಿ ರೇಷ್ಮೆ ಗೂಡಿನ ಗುಣಮಟ್ಟ ಆಧರಿಸಿ ದ್ವಿತಳಿ ಹಾಗೂ ಮಿಶ್ರತಳಿ ಗೂಡುಗಳನ್ನು ಮೂರು ಶ್ರೇಣಿಗಳಾಗಿ ವಿಂಗಡಿಸಿ, ವೈಜ್ಞಾನಿಕ ಉತ್ಪಾದನಾ ವೆಚ್ಚದ ಕನಿಷ್ಠ ಬೆಂಬಲ ಬೆಲೆಯನ್ನು ಶಿಫಾರಸ್ಸು ಮಾಡಿದ್ದು, ಮಾರುಕಟ್ಟೆ ಬೆಲೆಯು ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆಯಾದಾಗ ತಾತ್ಕಾಲಿಕ ಪರಿಹಾರವಾಗಿ ರಕ್ಷಣಾತ್ಮಕ ದರವನ್ನು ನೀಡಲು ಶಿಫಾರಸ್ಸು ಮಾಡಿರುತ್ತದೆ. ಈ ರಕ್ಷಣಾತ್ಮಕ ದರಗಳನ್ನು ರೇಷ್ಮೆ ಇಲಾಖೆಯು ನಿಗದಿಪಡಿಸಿರುವ ಇಳುವರಿ ಮಾನದಂಡಗಳನ್ನು ಅನುಸರಿಸಿ ಮಿಶ್ರತಳಿಗೆ ರೂ.280/- ರಿಂದ ರೂ.200/- ಹಾಗೂ ದ್ವಿತಳಿಗೆ ರೂ.325/- ರಿಂದ ರೂ.245/-ಕ್ಕೆ ಸೀಮಿತಗೊಳಿಸಿ ಈ ಕೆಳಕಂಡಂತೆ ನೀಡಲಾಗುವುದು.

| ಶ್ರೇಣಿಗಳು | ಕವಚದ ಅನುಪಾತ(ಶೇ) | ಕಳಪೆ ಗೂಡಿನ ಪ್ರಮಾಣ(ಶೇ.) | ಸಂಭವನೀಯ ರೆಂಡಿಟ್ಟಾ | ಕನಿಷ್ಟ ಬೆಂಬಲ ಬೆಲೆ(ರೂ/ಕೆಜಿ) |
|---|---|---|---|---|
| ದ್ವಿತಳಿ ಸಂಕರಣ | | | | |
| ಶ್ರೇಣಿ-I (ಉತ್ತಮ) | ≥ 21.00 | ≤ 8.00 | ≤ 6.25 | 325.00 |
| ಶ್ರೇಣಿ-II (ಮಧ್ಯಮ) | 20.00 – 20.99 | 8.01 – 12.00 | 6.26 – 6.80 | 285.00 |
| ಶ್ರೇಣಿ-III (ಸಾಧಾರಣ) | 19.00 – 19.99 | 12.01 – 15.00 | 6.81 – 7.50 | 245.00 |
| ಮಿಶ್ರತಳಿ | | | | |
| ಶ್ರೇಣಿ-I (ಉತ್ತಮ) | ≥17.50 | ≤ 8.00 | ≤ 7.50 | 280.00 |
| ಶ್ರೇಣಿ-II (ಮಧ್ಯಮ) | 17.00 – 17.49 | 8.01 – 12.00 | 7.51 – 8.00 | 240.00 |
| ಶ್ರೇಣಿ-III (ಸಾಧಾರಣ) | 16.00 – 16.99 | 12.01 -15.00 | 8.01 – 8..50 | 200.00 |

ಕನಿಷ್ಠ ಬೆಂಬಲ ಬೆಲೆಯನ್ನು ಕಾಲಕಾಲಕ್ಕೆ ಪರಿಷ್ಕರಿಸಬೇಕಾಗಿರುತ್ತದೆ. ಮುಂಬರುವ ವರ್ಷಗಳಲ್ಲಿ ಕನಿಷ್ಠ ಬೆಂಬಲ ಬೆಲೆಯನ್ನು ನಿರ್ಧರಿಸಲು ರೇಷ್ಮೆ ಇಲಾಖೆಯ ತಾಂತ್ರಿಕ ಅಧಿಕಾರಿಗಳು ಮತ್ತು ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ವಿಜ್ಞಾನಿಗಳನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಬೇಕಾಗುತ್ತದೆಂದು ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಿರುತ್ತಾರೆ.

ಪರಿಹಾರ ಧನವನ್ನು ಮಾರುಕಟ್ಟೆಯಲ್ಲಿ ಗೂಡು ಮಾರಾಟ ಮಾಡಿದ ದಿನದಂದೇ ನೇರವಾಗಿ ರೈತರಿಗೆ ವರ್ಗಾವಣೆ ಮಾಡುವ ವ್ಯವಸ್ಥೆ ಕಲ್ಪಿಸಲಾಗುವುದು. ಸದರಿ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ವಿಸ್ತೃತ ಮಾರ್ಗಸೂಚಿಯನ್ನು ತಯಾರಿಸಲಾಗುವುದು. ರೇಷ್ಮೆ ಗೂಡಿನ ದರದಲ್ಲಿ ಸ್ಥಿರತೆ ತಂದು

ಪು.ತಿ.ನೋ. . . .

ನಿರಂತರವಾಗಿ ರೇಷ್ಮೆ ಬೆಳೆಗಾರರು ಗೂಡು ಉತ್ಪಾದನೆಯಲ್ಲಿ ತೊಡಗಲು ಪ್ರೋತ್ಸಾಹಿಸಿದಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿಗೆ ಸಹಕಾರಿಯಾಗುವುದು. ರೇಷ್ಮೆ ಗೂಡಿನ ಧಾರಣೆಗಳಲ್ಲಿ ಸುಸ್ಥಿರತೆ ತರಲು ಸಾಧ್ಯವಾಗುವುದು. ರೇಷ್ಮೆ ಕೃಷಿ ಅಭಿವೃದ್ಧಿ ಹಾಗೂ ಕಚ್ಚಾ ರೇಷ್ಮೆ ಉತ್ಪಾದನೆಯಲ್ಲಿ ರಾಜ್ಯವು ಹೊಂದಿರುವ ಮುಂಚೂಣಿ ಸ್ಥಾನವನ್ನು ಕಾಯ್ದುಕೊಳ್ಳುವುದು ಹಾಗೂ ಅಂತರರಾಷ್ಟ್ರೀಯ ಕಚ್ಚಾ ರೇಷ್ಮೆ ಉತ್ಪಾದಿಸಲು ಪ್ರೋತ್ಸಾಹಿಸುವುದು. 2016-17ನೇ ಸಾಲಿನಲ್ಲಿ ಈ ಯೋಜನೆಯ ಅನುಷ್ಠಾನಕ್ಕಾಗಿ ರೂ. 2000.00 ಲಕ್ಷಗಳ ಅವಶ್ಯಕತೆ ಬೇಕಾಗಬಹುದು. ಈ ವೆಚ್ಚವನ್ನು 2016-17ನೇ ಸಾಲಿನ ಯೋಜನಾ ಲೆಕ್ಕ ಶೀರ್ಷಿಕೆ 2851-00-107-1-48 ರಡಿ ಒದಗಿಸಿರುವ ರೂ.8473.00 ಲಕ್ಷಗಳಿಂದ ಭರಿಸಲು ಆಡಳಿತಾತ್ಮಕ ಅನುಮೋದನೆ ನೀಡುವಂತೆ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಪ್ರಸ್ತಾವನೆಯಲ್ಲಿ ಕೋರಿರುತ್ತಾರೆ.

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಉತ್ಪಾದನೆ ಮತ್ತು ಉತ್ಪಾದಕತೆ ಆಧಾರಿತ ರೇಷ್ಮೆ ಗೂಡು ಉತ್ಪಾದನ ಪ್ರೋತ್ಸಾಹಧನ ಕಾರ್ಯಕ್ರಮವನ್ನು ದರ ರಕ್ಷಣಾ ಕಾರ್ಯಕ್ರಮವೆಂದು ಮಾರ್ಪಡಿಸಲು ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಲು ಮತ್ತು ಈ ಕಾರ್ಯಕ್ರಮದ ವೆಚ್ಚವನ್ನು 2016-17ನೇ ಸಾಲಿನ ಯೋಜನಾ ಲೆಕ್ಕ ಶೀರ್ಷಿಕೆ ರೇಷ್ಮೆ ಕೃಷಿ ಅಭಿವೃದ್ಧಿಗೆ ನೂತನ ಕರ್ತೃತ್ವ ಶಕ್ತಿ ಮತ್ತು ಭಾಗೀದಾರರಿಗೆ ಸವಲತ್ತು 2851-00-107-1-48 ರಡಿ ಒದಗಿಸಿರುವ ರೂ. 8473.00 ಲಕ್ಷಗಳಿಂದ ಭರಿಸಲು ಹಾಗೂ ಈ ಮಾರ್ಪಾಡು ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ವಿಸ್ತೃತ ಮಾರ್ಗಸೂಚಿಯನ್ನು ಹೊರಡಿಸಲು ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರಿಗೆ ಪ್ರತ್ಯಾಯೋಜಿಸಲು ಮತ್ತು ರೇಷ್ಮೆ ಗೂಡಿನ ರಕ್ಷಣಾತ್ಮಕ ದರವನ್ನು ಕಾಲಕಾಲಕ್ಕೆ ಪರಿಷ್ಕರಿಸಲು ಒಂದು ಸಮಿತಿಯನ್ನು ರಚಿಸಲು ಸರ್ಕಾರವು ನಿರ್ಧರಿಸಿರುವ ಕಾರಣ ಈ ಆದೇಶ.

## ಸರ್ಕಾರದ ಆದೇಶ ಸಂಖ್ಯೆ : ತೋಇ 87 ರೇಕೃವಿ 2016, ಬೆಂಗಳೂರು, ದಿನಾಂಕ 20-08-2016

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಉತ್ಪಾದನೆ ಮತ್ತು ಉತ್ಪಾದಕತೆ ಆಧಾರಿತ ರೇಷ್ಮೆ ಗೂಡು ಉತ್ಪಾದನಾ ಪ್ರೋತ್ಸಾಹಧನ ಕಾರ್ಯಕ್ರಮವನ್ನು ದರ ರಕ್ಷಣಾ ಕಾರ್ಯಕ್ರಮವೆಂದು ಮಾರ್ಪಡಿಸಲು ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿ ಈ ಕೆಳಕಂಡಂತೆ ಸಮಿತಿಯನ್ನು ರಚಿಸಲು ಮತ್ತು ಮಾರ್ಗಸೂಚಿಗಳನ್ನು ಹೊರಡಿಸಲು ಆದೇಶಿಸಲಾಗಿದೆ.

(1) ಡಾ|| ಬಸವರಾಜ ಹೆಚ್. ಇವರ ಅಧ್ಯಕ್ಷತೆಯಲ್ಲಿನ ತಾಂತ್ರಿಕ ಸಮಿತಿ ವರದಿಯ ಶಿಫಾರಸ್ಸಿನಂತೆ ರೇಷ್ಮೆ ಗೂಡಿನ ರಕ್ಷಣಾತ್ಮಕ ದರವನ್ನು ಕಾಲಕಾಲಕ್ಕೆ ಪರಿಷ್ಕರಿಸಲು ರೇಷ್ಮೆ ಇಲಾಖಾ ತಾಂತ್ರಿಕ ಅಧಿಕಾರಿಗಳು ಮತ್ತು ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ವಿಜ್ಞಾನಿಗಳನ್ನು ಒಳಗೊಂಡಂತೆ ಒಂದು ಸಮಿತಿಯನ್ನು ರಚಿಸುವುದು:

(2) ಈ ಮಾರ್ಪಾಡು ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ವಿಸ್ತೃತ ಮಾರ್ಗಸೂಚಿಯನ್ನು ಹೊರಡಿಸಲು ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರಿಗೆ ಪ್ರತ್ಯಾಯೋಜಿಸಲಾಗಿದೆ.

ಆರಂಭದಲ್ಲಿ ಈ ಮಾರ್ಪಾಡು ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರೂ. 20.00 ಕೋಟಿಗಳನ್ನು 2016-17ನೇ ಸಾಲಿನ ಯೋಜನಾ ಲೆಕ್ಕ ಶೀರ್ಷಿಕೆ ರೇಷ್ಮೆ ಕೃಷಿ ಅಭಿವೃದ್ಧಿಗೆ ನೂತನ ಕರ್ತೃತ್ವ ಶಕ್ತಿ ಮತ್ತು ಭಾಗೀದಾರರಿಗೆ ಸವಲತ್ತು 2851-00-107-1-48 ರಡಿ ಒದಗಿಸಿರುವ ರೂ. 8473.00 ಲಕ್ಷಗಳಿಂದ ಭರಿಸತಕ್ಕದ್ದು.

ಪು.ತಿ.ನೋ. . . .

ಈ ಆದೇಶವನ್ನು ಯೋಜನೆ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 24 ಎಫ್ಆರ್ಓ 2016, ದಿನಾಂಕ 28-06-2016ರ ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 324 ವೆಚ್ಚ-4/2016, ದಿನಾಂಕ 21-06-2016ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ-ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆರ್.ಎಲ್. ಚಿನ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ (ರೇಷ್ಮೆ)
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ

**<u>ಇವರಿಗೆ:</u>**

1. ಮಹಾಲೇಖಪಾಲರು, (ಜಿ&ಎಸ್ಎಸ್ಎ)/(ಇ&ಆರ್ಎಸ್ಎ)/(ಎ&ಇ) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ಹಿರಿಯ ನಿರ್ದೇಶಕರು/ನಿರ್ದೇಶಕರು, ಯೋಜನಾ ಇಲಾಖೆ, ಯೋಜನಾ ಸಂಯೋಜನಾ ಮತ್ತು ಮಾಹಿತಿ ವಿಭಾಗ/ಪಿ.ಎಫ್.ಆರ್. ವಿಭಾಗ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
7. ಆಂತರಿಕ ಆರ್ಥಿಕ ಸಲಹೆಗಾರರು ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಹಾಗೂ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನ ಸೌಧ, ಬೆಂಗಳೂರು.
9. ಸಚಿವ ಸಂಪುಟ ಶಾಖೆ, ವಿಧಾನ ಸೌಧ, ಬೆಂಗಳೂರು (ವಿಷಯ ಸಂಖ್ಯೆ: ಸಿ:362/2016, ದಿನಾಂಕ 09-08-2016)
10. ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
11. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
12. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು (ರೇಷ್ಮೆ), ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
13. ಶಾಖಾ ರಕ್ಷಾ ಕಡತ.